ಶ್ರೀ ಜಿ. ರಾಮೇಗೌಡ.--ಸರ್ಕಾರದ ಧೋರಣೆ ಪ್ರಕಾರ ಸಂಘ ಸಂಸ್ಥೆಗಳಿಗೆ ಸಹಕಾರಿ ಸಂಸ್ಥೆಗಳಿಗೆ, ಮುನಿಸಿಪಾಲಿಟಿಗೆ ಮಾತ್ರ ಕೊಡುತ್ತಿದ್ದೇವೆ. ವೈಯುಕ್ತಿಕವಾಗಿ ಯಾವ ವ್ಯಕ್ತಿಗಳಿಗೂ ಅವಕಾಶ ಕೊಡುತ್ತಿಲ್ಲ.

ಶ್ರೀ ಜೆ. ಡಿ. ಸೋಮಪ್ಪ.--ಸರ್ಕಾರ ಡಿಪೋಗಳನ್ನು ತೆರೆಯುವುದರಲ್ಲಿ ಮಾತ್ರವಲ್ಲದೆ! ನಾಗರೀಕ ಜನತೆಗೆ ಉತ್ತಮ ಸವಲತ್ತುಗಳನ್ನು ಒದಗಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ಇವತ್ತು ಜನತೆ ಜೀವನ ಮಾಡುವುದಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ಸ್ವಾಮಿ ?

ಶ್ರೀ ಜಿ. ರಾಮೇಗೌಡ.--ಸರ್ಕಾರ ವಿಫಲವಾಗಿದೆ ಎಂದು ಹೇಳುವುದು ಸರಿಯಾದ ಕಾರಣವಲ್ಲ. ನಾವು ಸಾಮಾನ್ಯವಾಗಿ ಸೌದೆ ಅಭಾವ ಇರತಕ್ಕ ಕಡೆ ಖಾಸಗಿಯವರು ತಂದು ಮಾರುವ ಕಡೆ ಸರ್ಕಾರದ ವತಿಯಿಂದಲೂ ಮಾರಾಟ ಮಾಡುವಂತೆ ಏರ್ಪಾಡು ಮಾಡಿದ್ದೇವೆ. ಇವತ್ತು ಒಂದು ಟನ್ ಸೌದೆಗೆ ೧೦೦ ರೂಪಾಯಿ ಕಡಿಮೆಯಿಲ್ಲ. ೧೨೦ ರೂಪಾಯಿ ಜಾಸ್ತಿ ಇಲ್ಲ.

Dyathanahalla Reservoir at Periyapatna Taluk.

1189. SRI K. S. KALAMARI GOWDA (Periyapatna).—Will the ster for Minor Irrigation be pleased to state :-

(a) the amount sanctioned during the current year for the Dyathanahalla Reservoir near Koppa, Periyapatna Taluk, which was estimated for Rs. 24 lakhs ;

(b) when the work would be completed by the Government ;

(c) the extent of land that would be brought under irrigation by this scheme ?

SRI D. B. CHANDRE GOWDA (Minister for Minor Irrigation).-

(a) Dyathanahalla Reservoir was not estimated for Rs. 24 lakhs. This scheme is not included in this years budget.

(b) This question does not arise.

(c) The detailed investigation is not yet completed.

ಶ್ರೀ ಕೆ. ಎಸ್. ಕಾಳಮರಿಗೌಡ.-ದ್ಯಾತನ ಹಳ್ಳಿದ ಜಲಾಶಯವು ಎರಡು ವರ್ಷದ ಹಿಂದೆಯೇ ೨೪ ಲಕ್ಷ ರೂಪಾಯಿಗೆ ಅಂದಾಜು ಆಗಿತ್ತು ! ತಮ್ಮ ಉತ್ತರದಲ್ಲಿ ಅಂದಾಜು ಮಾಡಿಲ್ಲ ಎಂದು ಹೇಳಿದ್ದೀರಿ. ಸ್ವಾಮಿ, ಈ ಜಲಾಶಯದಿಂದ ಸುಮಾರು ೮,೦೦೦ ಎಕರೆ ನೀರಾವರಿಯಾಗುತ್ತದೆ. ಆದ್ದರಿಂದ ಈ ಸಾರಿ ಯೋಜನೆಯನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸುತ್ತೀರಾ ಸ್ವಾಮಿ ?

ಶ್ರೀ ಡಿ. ಬಿ. ಚಂದ್ರೇಗೌಡ.--ಸ್ವಾಮಿ, ಒರಿಜನಲ್ ೪೦ ಲಕ್ಷ ರೂಪಾಯಿಗೆ ಅಂದಾಜಾಗಿತ್ತು. ಪುನಃ ಮೈನರ್ ಇರಿಗೇಷನ್‌ನಲ್ಲಿ ೩೦ ಲಕ್ಷ ರೂಪಾಯಿ ಅಂದಾಜಾಗಿ ಮತ್ತೆ ೨೦ ಲಕ್ಷ ರೂಪಾಯಿ ಅಂದಾಜು ಮಾಡಿ ಕಳುಹಿಸಿದ್ದಾರೆ. ೫ ಸಾವಿರ ಎಕರೆ ನೀರಾವರಿ ಯಾಗುತ್ತದೆಂದು ತೀರ್ಮಾನ ಮಾಡಿ ಕಳುಹಿಸಿದ್ದಾರೆ. ಇದರ ಬಗ್ಗೆ ಡಿಲೈಲ್ಸ್, ಇನ್‌ವೆಸ್ಟಿಗೇಷನ್ ಮಾಡುವಂತೆ ಅಧಿಕಾರಿಗಗಳಿಗೆ ಆದೇಶ ಕೊಟ್ಟಿದ್ದೇನೆ.

ಅಧ್ಯಕ್ಷರು.--ಪ್ರಶ್ನೋತರ ವೇಳೆ ಮುಗಿಯಿತು.